ದಿಃ05.10.2023 OS.No.215/2020 PW-1

ದಿ:05.10.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ.ಆರ್.ಜಿ.ಪಿ. ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ದಿಃ16.02.2015 ರ ನೋಂದಾಯಿತವಲ್ಲದ ಕ್ರಯದ ಕರಾರು ಪತ್ರವನ್ನು ನಿಪಿ.1 ಎಂದು, ಕಂದಾಯ ಪಾವತಿ ರಶೀದಿಯನ್ನು ನಿಪಿ.2 ಎಂದು, ನಾಲ್ಕು ಗಣಕೀಕೃತ ಪಹಣಿಗಳನ್ನು ನಿಪಿ.3 ರಿಂದ 6 ಎಂದು, ಒಂದು ಎಂ.ಆರ್. ಪ್ರತಿಯನ್ನು ನಿಪಿ.7 ಎಂದು, ದಿಃ02.03.2018 ರ ತಿಳುವಳಿಕೆ ನೋಟೀಸನ್ನು ನಿಪಿ.8 ಎಂದು, ದಿಃ16.03.2018 ರ ಪ್ರತ್ಯುತ್ತರ ನೋಟೀಸನ್ನು ನಿಪಿ.9 ಎಂದು, ಪೋಲಿಸರು ನೀಡಿದ ಹಿಂಬರಹ ಮತ್ತು ಸ್ವೀಕೃತಿಯನ್ನು ನಿಪಿ.10 ಮತ್ತು 11 ಎಂದು, ದಿಃ20.07.2020 ರ ತಿಳುವಳಿಕೆ ನೋಟೀಸನ್ನು ನಿಪಿ.12 ಎಂದು, 14 ಅಂಚೆ ರಶೀದಿಗಳನ್ನು ನಿಪಿ.13 ರಿಂದ 26 ಎಂದು, ನೋಟೀಸು ಜಾರಿಯಾದ ಬಗ್ಗೆ ಅಂಚೆ ಇಲಾಖೆಯವರು ನೀಡಿದ ಹಿಂಬರಹವನ್ನು ನಿಪಿ.27 ಎಂದು, ಜಾರಿಯಾಗದೇ ವಾಪಸ್ಸಾದ 12 ಅಂಚೆ ಲಖೋಟೆಗಳನ್ನು ನಿಪಿ.28 ರಿಂದ 39 ಎಂದು, ಸದರಿ ಅಂಚೆಲಖೋಟೆಗಳನ್ನು ತೆರೆದು ನೋಡಲಾಗಿ ಅದರ ಒಳಗಡೆ ಇರುವ ನೋಟೀಸಿನ ಪ್ರತಿಯನಗಳನ್ನು ನಿಪಿ.28 ಎ ಇಂದ 39 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ವಕೀಲರಿಂದ</u>

|ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ